**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 166/2018**

**ಚಾ.ಸಾ - 10**

**ಪ್ರಾ.ಸಾ- 6**

**ಸಾಕ್ಷಿಗೆ ದಿನಾಂಕ 25-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಹ್ಮದ ನಿಸಾರುದ್ದೀನ್ |
| ತಂದೆಯ ಹೆಸರು | ಃ | ಮಹ್ಮದ ಬಸೀರುದ್ದೀನ್ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ನಿವೃತ್ತ ಎಎಸ್ಐ, ಜೇವರ್ಗಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಕಲ್ಬುರ್ಗಿ ಹಾಗೂ ಹೈದರಾಬಾದ್ |

**ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನಾನು ಜೂನ್ -2012 ರಿಂದ ಸೆಪ್ಟೆಂಬರ್-2015ರವರೆಗೆ ಜೇವರಗಿ ಪೋಲಿಸ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10-12-2014 ರಂದು ಬೆಳಿಗ್ಗೆ 10-15 ಗಂಟೆಗೆ ನಾನು ಠಾಣಾ ಕರ್ತವ್ಯಲ್ಲಿದ್ದಾಗ, ಚಾಸಾ-1 ದೌಲತರಾಯ ತಂದೆ ಭಗವಂತರಾಯರವರು, ಆಹಾರ ನಿರೀಕ್ಷರು ತಹಸಿಲ್ದಾರ ಕಚೇರಿ ಜೇವರ್ಗಿರವರು ಠಾಣೆಗೆ ಹಾಜರಾಗಿ ಒಂದು ಲಾರಿ, 295 ಪಡಿತರ ಅಕ್ಕಿ ಚೀಲಗಳನ್ನು ಹಾಗೂ ವರದಿಯನ್ನು ತಂದು ಹಾಜರುಪಡಿಸಿದ್ದು ಸದರಿ ವರದಿ ಆಧಾರದ ಮೇರೆಗೆ ಠಾಣಾ ಗುನ್ನೆ ನಂ.252/2014 ರಂತೆ ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ಹಾಗೂ 102 Cr.PC ಹಾಗೂ ಭಾರತೀಯ ದಂಡ ಸಂಹಿತೆ ಕಲಂ. 420, 406 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ದಾಳಿಯಲ್ಲಿ ಭಾಗಿಯಾದ ನಮ್ಮ CPI ರಾದ ಸಂಗಪ್ಪ ಹುಲ್ಲುರು ಹಾಗೂ ಆಹಾರ ನಿರೀಕ್ಷಕರಾದ ನಜೀರ್ ಅಹ್ಮದ ಹಾಗೂ ಪೊಲೀಸ್ ಸಿಬ್ಬಂದಿಯಾದ ಚರಣರಾಜ, ಮಲ್ಲಿಕಾರ್ಜುನ, ತುಕಾರಾಮರವರು ನನ್ನ ಮುಂದೆ ಘಟನೆ ಬಗ್ಗೆ ಹೇಳಿ ಕೇಸ್ ಮಾಡಿಕೊಳ್ಳಿ

ಅಂತಾ ಹೇಳಿರುತ್ತಾರೆ.

ಸದರಿ ಲಾರಿ ಚಾಲಕ ಹಳ್ಳಿ ಹಳ್ಳಿಗಳಿಂದ ಪಡಿತರ ಅಕ್ಕಿ ಸಂಗ್ರಹಿಸಿ ಹೆಚ್ಚಿ ನ ಬೆಲೆಗೆ ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಮಾರಾಟ ಮಾಡುವ ವಿಚಾರದಿಂದ ಸಾಗಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ದಿನಾಂಕ 10-12-2014 ರಂದು ಬೆಳಿಗ್ಗೆ 11-30 ರಿಂದ 01-30 ವರೆಗೆ ಪಂಚರಾದ ಮಹೇಬೂಬ ಪಟೇಲ ಹಾಗೂ ಸುಭಾಸ್ ಇಬ್ಬರೂ ಸಾಃ ಜೇವರ್ಗಿರವರ ಸಮಕ್ಷಮ ಪಂಚನಾಮೆ ಜರುಗಿಸಿ ಲಾರಿ ನಂ.ಎಪಿ-23 ವೈ-2259 ರ ಲಾರಿಯನ್ನು ಹಾಗೂ 295 ಅಕ್ಕಿ ಚೀಲಗಳನ್ನು ಪರಿಶೀಲಿಸಲಾಗಿ ಪ್ರತಿ ಚೀಲ 50 ಕೆ.ಜಿ. ತೂಕದ್ದಾಗಿದ್ದು ಅವುಗಳಲ್ಲಿ 15 ಗೋಣಿ ಚೀಲಗಳಾಗಿದ್ದು ಹಾಗೂ 280 ಚೀಲಗಳು ಪ್ಲಾಸ್ಟಿಕ್ ಚೀಲಗಳಾಗಿದ್ದವು. ಸದರಿ ಚೀಲಗಳ ಅಂದಾಜು ಮೌಲ್ಯ ತಲಾ 500 ರೂಪಾಯಿ ಆಗುತ್ತಿತ್ತು. ಒಟ್ಟು ಅಕ್ಕಿ ಮೌಲ್ಯ ರೂ.147500/- ಆಗುತ್ತಿತ್ತು. ಅವುಗಳಲ್ಲಿನ ಒಂದು ಪ್ಲಾಸ್ಟಿಕ್ ಚೀಲವನ್ನು ಚಾಸಾ-1 ದೌಲತರಾಯರವರು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡು ಜಪ್ತಿಪಡಿಸಿಕೊಂಡಿರುತ್ತಾರೆ. ಆ ನಂತರ ಉಳಿಕೆ ಚೀಲಗಳನ್ನು ಹಾಗೂ ಲಾರಿಯನ್ನು ಮುಂದಿನ ಕ್ರಮಕ್ಕಾಗಿ ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ.

ದಿನಾಂಕ 10-12-2014 ರಂದೇ ಮೇಲೆ ಹೇಳಿದಂತಹ ಚಾಸಾ-1ರವರು ಆರೋಪಿ , ಲಾರಿ , ಚೀಲಗಳು ಹಾಗೂ ವರದಿಯೊಂದಿಗೆ ನನ್ನ ಮುಂದೆ ಹಾಜರಾಗಿದ್ದರು. ಸದರಿ ಆರೋಪಿಯನ್ನು ತನಿಖೆಗಾಗಿ ನಮ್ಮ ಪೊಲೀಸ್ ಪೇದೆ-460 ಹಾಗೂ 917ರವರ ಬೆಂಗಾವಲಿನಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಹಾಗೂ ಆರೋಪಿಯ ಸ್ವ-ಖುಷಿ ಹೇಳಿಕೆ ಪಡೆದುಕೊಂಡಿರುತ್ತೇನೆ.

ದಿನಾಂಕ 15-12-2014 ರಂದು ಲಾರಿ ಮಾಲೀಕನಾದ ಮಹ್ಮದ್ ನಯಿಮ್ ತಂದೆ ಮೊಯಿನುದ್ದೀರವರು ಠಾಣೆಗೆ ಹಾಜರಾಗಿ ಸದರಿ ಲಾರಿ ತನಗೆ ಸೇರಿದ್ದು ಸದರಿ ಲಾರಿಯನ್ನು ಸಾದಿಕ್ ರವರು ನನಗೆ ಗೊತ್ತಾಗದ ಹಾಗೆ ಲಾರಿಯಲ್ಲಿ ಪಡಿತರ ಅಕ್ಕಿಯನ್ನು ಸಾಗಿಸಿರುತ್ತಾನೆ ಅಂತಾ ಹೇಳಿರುತ್ತಾನೆ. ಸದರಿ ಲಾರಿ ಮಾಲೀಕರ ಹೇಳಿಕೆ ಪಡೆದುಕೊಂಡಿರುತ್ತೇನೆ. ಆ ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ CPI ರವರಾದ ಸಂಗಪ್ಪ ಎಸ್.ಹುಲ್ಲೂರುರವರಿಗೆ ಹಸ್ತಾಂತರಿಸಿರುತ್ತೇನೆ.

ಆ ದಿನ ನನ್ನ ಸಮಕ್ಷಮ ಹಾಜರುಪಡಿಸಿದ ಲಾರಿ ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿ ನಿಪಿ-2 ರಿಂದ 5ರಲ್ಲಿ ಕಾಣುವ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರಾಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-6(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಅದು ಪ್ರಥಮ ವರ್ತಮಾನ ವರದಿಯಾಗಿದ್ದು ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ-7 ಎಂದು ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಅದು ಸ್ಥಳ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-1(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಜೆ.ವಿ.ಹೆಚ್. ಆರೋಪಿ ಪರ ವಕೀಲರಿಂದಃ**

ದಿಃ 10-12-2014 ರಂದು ಬೆಳಿಗ್ಗೆ 10-15 ಗಂಟೆಗೆ ನಾನು ಠಾಣಾ ಕರ್ತವ್ಯಲ್ಲಿದ್ದಾಗ, ಚಾಸಾ-1 ದೌಲತರಾಯ ತಂದೆ ಭಗವಂತರಾಯರವರು, ಆಹಾರ ನಿರೀಕ್ಷರು ತಹಸಿಲ್ದಾರ ಕಚೇರಿ ಜೇವರ್ಗಿರವರು ಠಾಣೆಗೆ ಹಾಜರಾಗಿ ಒಂದು ಲಾರಿ, 295 ಪಡಿತರ ಅಕ್ಕಿ ಚೀಲಗಳನ್ನು ಹಾಗೂ ವರದಿಯನ್ನು ತಂದು ಹಾಜರುಪಡಿಸಿತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಳಿಯಲ್ಲಿ ಭಾಗಿಯಾದ ನಮ್ಮ CPI ರಾದ ಸಂಗಪ್ಪ ಹುಲ್ಲುರು ಹಾಗೂ ಆಹಾರ ನಿರೀಕ್ಷಕರಾದ ನಜೀರ್ ಅಹ್ಮದ ಹಾಗೂ ಪೊಲೀಸ್ ಸಿಬ್ಬಂದಿಯಾದ ಚರಣರಾಜ, ಮಲ್ಲಿಕಾರ್ಜುನ, ತುಕಾರಾಮರವರು ನನ್ನ ಮುಂದೆ ಘಟನೆ ಬಗ್ಗೆ ಹೇಳಿ ಕೇಸ್ ಮಾಡಿಕೊಳ್ಳಿ ಅಂತಾ ಹೇಳಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಚಾಲಕ ಹಳ್ಳಿ ಹಳ್ಳಿಗಳಿಂದ ಪಡಿತರ ಅಕ್ಕಿ ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಮಾರಾಟ ಮಾಡುವ ವಿಚಾರದಿಂದ ಸಾಗಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10-12-2014 ರಂದು ಬೆಳಿಗ್ಗೆ 11-30 ರಿಂದ 01-30 ವರೆಗೆ ಪಂಚರಾದ ಮಹೇಬೂಬ ಪಟೇಲ ಹಾಗೂ ಸುಭಾಸ್ ಇಬ್ಬರೂ ಸಾಃ ಜೇವರ್ಗಿರವರ ಸಮಕ್ಷಮ ಪಂಚನಾಮೆ ಜರುಗಿಸಿ ಲಾರಿ ನಂ.ಎಪಿ-23 ವೈ-2259 ರ ಲಾರಿಯನ್ನು ಹಾಗೂ 295 ಅಕ್ಕಿ ಚೀಲಗಳನ್ನು ಪರಿಶೀಲಿಸಲಾಗಿ ಪ್ರತಿ ಚೀಲ 50 ಕೆ.ಜಿ. ತೂಕದ್ದಾಗಿದ್ದು ಅವುಗಳಲ್ಲಿ 15 ಗೋಣಿ ಚೀಲಗಳಾಗಿದ್ದು ಹಾಗೂ 280 ಚೀಲಗಳು ಪ್ಲಾಸ್ಟಿಕ್ ಚೀಲಗಳಾಗಿದ್ದವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೀಲಗಳ ಅಂದಾಜು ಮೌಲ್ಯ ತಲಾ 500 ರೂಪಾಯಿ ಆಗುತ್ತಿತ್ತು. ಒಟ್ಟು ಅಕ್ಕಿ ಮೌಲ್ಯ ರೂ.147500/- ಆಗುತ್ತಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳಲ್ಲಿನ ಒಂದು ಪ್ಲಾಸ್ಟಿಕ್ ಚೀಲವನ್ನು ಚಾಸಾ-1 ದೌಲತರಾಯರವರು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆದುಕೊಂಡು ಜಪ್ತಿಪಡಿಸಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನಂತರ ಉಳಿಕೆ ಚೀಲಗಳನ್ನು ಹಾಗೂ ಲಾರಿಯನ್ನು ಮುಂದಿನ ಕ್ರಮಕ್ಕಾಗಿ ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 10-12-2014 ರಂದೇ ಮೇಲೆ ಹೇಳಿದಂತಹ ಚಾಸಾ-1ರವರು ಆರೋಪಿ, ಲಾರಿ, ಚೀಲಗಳು ಹಾಗೂ ವರದಿಯೊಂದಿಗೆ ನನ್ನ ಮುಂದೆ ಹಾಜರಾಗಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ತನಿಖೆಗಾಗಿ ನಮ್ಮ ಪೊಲೀಸ್ ಪೇದೆ-460 ಹಾಗೂ 917ರವರ ಬೆಂಗಾವಲಿನಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಸ್ವ-ಖುಷಿ ಹೇಳಿಕೆ ಪಡೆದುಕೊಂಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 15-12-2014 ರಂದು ಲಾರಿ ಮಾಲೀಕನಾದ ಮಹ್ಮದ್ ನಯಿಮ್ ತಂದೆ ಮೊಯಿನುದ್ದೀರವರು ಠಾಣೆಗೆ ಹಾಜರಾಗಿ ಸದರಿ ಲಾರಿ ತನಗೆ ಸೇರಿದ್ದು ಸದರಿ ಲಾರಿಯನ್ನು ಸಾದಿಕ್ ರವರು ನನಗೆ ಗೊತ್ತಾಗದ ಹಾಗೆ ಲಾರಿಯಲ್ಲಿ ಪಡಿತರ ಅಕ್ಕಿಯನ್ನು ಸಾಗಿಸಿರುತ್ತಾನೆ ಅಂತಾ ಹೇಳಿರುತ್ತಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಮಾಲೀಕರ ಹೇಳಿಕೆ ಪಡೆದುಕೊಂಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆ ಜರುಗಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 166/2018**

**ಚಾ.ಸಾ - 12**

**ಪ್ರಾ.ಸಾ- 7**

**ದಿನಾಂಕ 25-03-2025 ರಂದು ಸಾಯಂಕಾಲ 05-00 ಗಂಟೆ ಸಮಯದಲ್ಲಿ ಮಾನ್ಯ ಉಚ್ಛ ನ್ಯಾಯಾಲಯ ಕರ್ನಾಟಕದ ವಿಡಿಯೋ ಕಾನ್ಫರೆನ್ಸ್ ನಿಯಮದಂತೆ ಗಾಂಧಿ ಗಂಜ್ ಪೊಲೀಸ್ ಠಾಣೆ ಬೀದರ್ ಪೊಲೀಸ್ ಠಾಣೆಯಲ್ಲಿ ವಿಡಿಯೋ ಕಾನ್ಫರೆನ್ಸ್ ನಿಯಮದಂತೆ ಕೋ-ಆರ್ಡಿನೇಟರ್ ಆಗಿ ಶ್ರೀ ರಾಜು, ಪೊಲೀಸ್ ಪೇದೆ-1208 ಮತ್ತು ನ್ಯಾಯಾಲಯದ ಕೋರ್ಟ್ ಹಾಲನಲ್ಲಿ ಕೋ-ಆರ್ಡಿನೇಟರ್ ಆಗಿ ಶ್ರೀ ಮಹಾಲಿಂಗಪ್ಪ ಪ್ರ.ದ.ಸ.ರವರನ್ನು ನೇಮಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿ ಸಾಕ್ಷ್ಯವನ್ನು ಈ ಕೆಳಕಂಡಂತೆ ತೆಗೆದುಕೊಳ್ಳಲಾಯಿತು.**

**ಸಾಕ್ಷಿಗೆ ದಿನಾಂಕ 25-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ಆನಂದರಾವ |
| ತಂದೆಯ ಹೆಸರು | ಃ | ಶಿವರಾಮ್ ನಿಂಬರಗಿ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಪೋಲಿಸ ನಿರೀಕ್ಷಕರು, ಗಾಂಧಿ ಗಂಜ್ ಪೊಲೀಸ್ ಠಾಣೆ ಬೀದರ |
| ವಾಸಸ್ಥಳ | ಃ | ಬೀದರ |

**ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ:**

ನಾನು 01-03-2015 ರಿಂದ 05-05-2015ರವೆರೆಗ ಜೇವರ್ಗಿಯಲ್ಲಿ ಪೊಲೀಸ್ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18-03-2015ರಂದು ಈ ಪ್ರಕರಣದ ಕಡತಗಳನ್ನು ಮಲ್ಲಿಕಾರ್ಜುನ ASIರವರಿಂದ ಪಡೆದುಕೊಂಡು ಕಡತಗಳನ್ನು ಪರಿಶೀಲಿಸಿ ಅದೇ ದಿನ ಜಪ್ತಿಪಡಿಸಿಕೊಂಡ ಅಕ್ಕಿಯು ಪಡಿತರ ಅಕ್ಕಿಯೆಂದು

ಆಹಾರ ನಿರೀಕ್ಷಕರವರಿಂದ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ತನಿಖೆ ಪೂರ್ಣಗೊಂಡಿದ್ದು ಆರೋಪಿ ವಿರುದ್ಧ ಅದೇ ದಿನ ದೋಷಾರೋಪಣೆ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಜಪ್ತಿಪಡಿಸಿಕೊಂಡ ಅಕ್ಕಿಯು ಪಡಿತರ ಅಕ್ಕಿಯೆಂದು ಆಹಾರ ನಿರೀಕ್ಷಕರವರಿಂದ ಪಡೆದ ದೃಢೀಕರಣ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-8 ಎಂದು ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಕೆ.ಎಸ್.ಎಂ. ಆರೋಪಿ ಪರ ವಕೀಲರಿಂದ</u>**

ದಿನಾಂಕ 18-03-2015ರಂದು ಈ ಪ್ರಕರಣದ ಕಡತಗಳನ್ನು ಮಲ್ಲಿಕಾರ್ಜುನ ASIರವರಿಂದ ಪಡೆದುಕೊಂಡು ಕಡತಗಳನ್ನು ಪರಿಶೀಲಿಸಿ ಅದೇ ದಿನ ಜಪ್ತಿಪಡಿಸಿಕೊಂಡ ಅಕ್ಕಿಯು ಪಡಿತರ ಅಕ್ಕಿಯೆಂದು ಆಹಾರ ನಿರೀಕ್ಷಕರವರಿಂದ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ತನಿಖೆ ಪೂರ್ಣಗೊಂಡಿದ್ದು ಆರೋಪಿ ವಿರುದ್ಧ ಅದೇ ದಿನ ದೋಷಾರೋಪಣೆ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1ರವರು ಸಲ್ಲಿಸಿದ ದೂರಿಗೆ ಪೂರಕವಾಗುವಂತೆ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಆರೋಪಿ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು

ಜೇವರ್ಗಿ

Remote point Co-Ordinator

Signature:

(Mahalingappa)

FDA

Remote point Co- Ordinator

Signature:

(Raju)

Police Constable-1208

**<u>ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ</u>**

**<u>CC 166/2018</u>**

**ದಿನಾಂಕ 25-03-2024ರಂದು ಮಧ್ಯಾಹ್ನ 04-00 ಗಂಟೆ ಸಮಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕದ ವಿಡಿಯೋ ಕಾನ್ಫರೆನ್ಸ್ ನಿಯಮದಂತೆ ಜಮಖಂಡಿ ಗ್ರಾಮಾಂತರ ಪೊಲೀಸ್ ಠಾಣೆನಲ್ಲಿ ವಿಡಿಯೋ ಕಾನ್ಫರೆನ್ಸ್ ನಿಯಮದಂತೆ ಕೋ-ಆರ್ಡಿನೇಟರ್ ಆಗಿ ಶ್ರೀ ಶೇಖರ್ ನಾಯಕ್, ಪೊಲೀಸ್ ಮುಖ್ಯ ಪೇದೆ ನ್ಯಾಯಾಲಯದ ಕೋರ್ಟ್ ಹಾಲನಲ್ಲಿ ಕೋ-ಆರ್ಡಿನೇಟರ್ ಆಗಿ ಶ್ರೀ ಮಹಾಲಿಂಗಪ್ಪ ಪ್ರ.ದ.ಸ.ರವರನ್ನು ನೇಮಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿ ಸಾಕ್ಷ್ಯವನ್ನು ಈ ಕೆಳಕಂಡಂತೆ ತೆಗೆದುಕೊಳ್ಳಲಾಯಿತು.**

**ಸಾಕ್ಷಿಗೆ ದಿನಾಂಕ 25-03-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಪರಶುರಾಮ | CW-12 |
| ತಂದೆ ಹೆಸರು | ಃ | ನಿಂಗಪ್ಪ ಮನಗೂಳಿ. | PW-7 |
| ವಯಸ್ಸು | ಃ | 38 ವರ್ಷ | |
| ಉದ್ಯೋಗ | ಃ | ಪಿ.ಎಸ್.ಐ. ಜಮಖಂಡಿ ಗ್ರಾಮಾಂತರ ಪೊಲೀಸ್ ಠಾಣೆ (Crime) | |
| ವಾಸಸ್ಥಳ | ಃ | ಜಮಖಂಡಿ | |

**<u>ಸಾಕ್ಷಿಯ ವಿಚಾರಣೆ Video Conference ಮುಖಾಂತರ</u>**

**<u>ಮುಖ್ಯ ವಿಚಾರಣೆ ಸಹಾಯಕ ಸರಕಾರಿ ಅಭಿಯೋಜಕರಿಂದ</u>**

ದಿನಾಂಕ 06-03-2014 ರಿಂದ 09-03-2015ವರೆಗೆ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01-10-2014 ರಂದು ರಾತ್ರಿ 08-15 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ, ಚಾಸಾ-1 ಸುಗುಲಾಬಾಯಿರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.203/2014 ರಂತೆ ಭಾರತೀಯ ದಂಡ ಸಂಹಿತೆ ಕಲಂ.454, 380ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ

ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರಕರಣವು ಘೋರ ಸ್ವರೂಪದ ಪ್ರಕರಣವಾದ ಕಾರಣ ಪ್ರಕರಣದ ಕಡತಗಳನ್ನು ಹೆಚ್ಚಿನ ತನಿಖೆಗಾಗಿ ಚಾಸಾ-19 ಬಾಸು ಚವ್ಹಾಣರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರಾಗಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಅದು ಪ್ರ.ವ.ವರದಿಯಾಗಿದ್ದು ಸದರಿ ಪ್ರ.ವ.ವರದಿಯನ್ನು ನಿಶಾನೆ ಪಿ-17 ಎಂದು ಸಾಕ್ಷಿ ಸಹಿಯನ್ನು 17(ಎ) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಎಸ್.ಪಿ. ವಕೀಲರಿಂದಃ**

ಆರೋಪಿ ಯಾವುದೇ ಕಳ್ಳತನ ಮಾಡದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲೆ ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ-1ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು

ಜೇವರ್ಗಿ

Remote point Co-Ordinator

Signature:

(Mahalingappa)

FDA

Remote point Co- Ordinator

Signature:

(ಶೇಖರ್ ನಾಯಕ)

ಪೊಲೀಸ್ ಮುಖ್ಯ ಪೇದೆ